# ನಗರಾಭಿವೃದ್ಧಿ ಮಂತ್ರಾಲಯ

## ಅಧಿಸೂಚನೆ

## ನವದೆಹಲಿ, 25 ನೇ ಮೇ 2011

**ಸಾ.ಕಾ.ನಿ. 403(ಇ)** ಮೆಟ್ರೋ ರೈಲ್ವೆ (ಕಾರ್ಯಾಚರಣೆ ಮತ್ತು ನಿರ್ವಹಣೆ) ಅಧಿನಿಯಮ, 2002 (2002 ರ 60) ರ ಪ್ರಕರಣ 47 ರ ಮೇರೆಗೆ ಪದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕೇಂದ್ರ ಸರ್ಕಾರವು ಈ ಮುಂದಿನ ನಿಯಮಗಳನ್ನು ರಚಿಸಿದೆ, ಎಂದರೆ;

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:** (1) ಈ ನಿಯಮವನ್ನು ಬೆಂಗಳೂರು ಮೆಟ್ರೋ ರೈಲ್ವೆ (ಅಪಘಾತಗಳ ನೋಟೀಸು ಮತ್ತು ವಿಚಾರಣೆ), ನಿಯಮಗಳು, 2011 ಎಂದು ಕರೆಯತಕ್ಕದ್ದು.

(2) ಇದು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು:** (1) ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,

(ಎ) "ಅಧಿನಿಯಮ" ಎಂದರೆ, ಮೆಟ್ರೋ ರೈಲ್ವೆ (ಕಾರ್ಯಾಚರಣೆ ಮತ್ತು ನಿರ್ವಹಣೆ) ಅಧಿನಿಯಮ, 2002 (2002 ರ 60);

(ಬಿ) "ಅಧಿಕೃತ" ಎಂದರೆ ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತದಿಂದ ಅಧಿಕೃತಗೊಂಡದ್ದು.

(ಸಿ) "ಆಯುಕ್ತರು" ಎಂದರೆ ಅಧಿನಿಯಮದ 7 ನೇ ಪ್ರಕರಣದ ಮೇರೆಗೆ ನೇಮಕಗೊಂಡ ಮೆಟ್ರೋ ರೈಲ್ವೆ ಸುರಕ್ಷಾ ಆಯುಕ್ತರು.

(ಡಿ) "ನಮೂನೆ" ಎಂದರೆ ಈ ನಿಯಮಕ್ಕೆ ಸೇರಿಸಲಾದ ನಮೂನೆ

(ಇ) "ಪ್ರಯಾಣಿಕ" ಎಂದರೆ ಬೆಂಗಳೂರು ಮೊಟ್ರೋ ರೈಲಿನಲ್ಲಿ ಸಿಂಧುವಾದ ಟಿಕೆಟ್ ಅಥವಾ ಪಾಸನ್ನು ಹೊಂದಿ ಪ್ರಯಾಣಿಸುತ್ತಿರುವ ಪ್ರಯಾಣಿಕ.

(2) ಈ ನಿಯಮಗಳಲ್ಲಿ ಉಪಯೋಗಿಸಿದ ಮತ್ತು ವ್ಯಕ್ತಪಡಿಸಿದ ಪದಗಳನ್ನು ಪರಿಭಾಷಿಸದಿದ್ದರೆ, ಆದರೆ ಅವುಗಳನ್ನು ಮೆಟ್ರೋ ರೈಲ್ವೆ (ಪ್ರಚಾಲನೆ ಮತ್ತು ನಿರ್ವಹಣೆ) ಅಧಿನಿಯಮ, 2002 (2002 ರ 60) ರಲ್ಲಿ ಪರಿಭಾಷಿಸಿದ್ದರೆ, ಅದರಲ್ಲಿ ಅವುಗಳಿಗೆ ನೀಡಿರುವ ಅರ್ಥವನ್ನೇ ಈ ಅಧಿನಿಯಮದಲ್ಲೂ ಅರ್ಥೈಸತಕ್ಕದ್ದು.

3. **ನೋಟೀಸಿನಲ್ಲಿ ನೀಡಬೇಕಾದ ವಿವರಗಳು:** ಬೆಂಗಳೂರು ಮೆಟ್ರೋ ರೈಲ್ವೆಯು ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ;-

(ಎ) ಯಾವುದೇ ಅಪಘಾತದಿಂದ ಮಾನವ ಪ್ರಾಣ ಹಾನಿಯುಂಟಾದರೆ, ಅಥವಾ ಭಾರತೀಯ ದಂಡ ಸಂಹಿತೆಯಲ್ಲಿ ಪರಿಭಾಷಿಸಿರುವಂತಹ ತೀವ್ರ ಗಾಯಗಳುಂಟಾದರೆ, ಅಥವಾ

(ಬಿ) ರೈಲುಗಳ ಮಧ್ಯೆ ಘರ್ಷಣೆಯುಂಟಾದರೆ, ಅಥವಾ

(ಸಿ) ಪ್ರಯಾಣಿಕರನ್ನು ಸಾಗಿಸುತ್ತಿರುವ ರೈಲು ಹಳಿತಪ್ಪಿದರೆ ಅಥವಾ ರೈಲಿನ ಯಾವುದೇ ಭಾಗ ಹಳಿತಪ್ಪಿದರೆ, ಅಥವಾ

(ಡಿ) ಯಾವುದೇ ಅಪಘಾತವು ಮಾನವ ಪ್ರಾಣ ಹಾನಿಯಲ್ಲಿ ಅಥವಾ ಮೇಲ್ಕಾಣಿಸಿದ ತೀವ್ರಗಾಯಗಳ ವಿವರಣೆಯುಳ್ಳದ್ದಾಗಿದ್ದರೆ, ಅಥವಾ

(ಇ) ಕೇಂದ್ರ ಸರ್ಕಾರವು ಈ ಸಂಬಂಧದಲ್ಲಿ ಅಧಿಕೃತ ಗೆಜೆಟ್‌ನಲ್ಲಿ ಅಧಿಸೂಚಿಸುವಂತ ಯಾವುದೇ ರೀತಿಯ ವಿವರಣೆಯುಳ್ಳ ಯಾವುದೇ ಅಪಘಾತಗಳು

ಸಂಭವಿಸಿದರೆ, ಅಪಘಾತ ಸಂಭವಿಸಿದ ಮೆಟ್ರೋ ರೈಲ್ವೆ ವಿಭಾಗದ ಪ್ರಭಾರವಹಿಸಿರುವ ಬೆಂಗಳೂರು ಮೆಟ್ರೋ ರೈಲ್ವೆ ಸಿಬ್ಬಂದಿಯು ವಿಳಂಬವಿಲ್ಲದೆ, ನಮೂನೆ 1 ರಲ್ಲಿ ನಮೂದಿಸಿರುವಂತಹ ವಿವರಣೆಯುಳ್ಳ ನೋಟೀಸನ್ನು ನೀಡತಕ್ಕದ್ದು.

4. **ನೋಟೀಸನ್ನು ಕಳುಹಿಸುವ ವಿಧಾನ:** ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತವು ಅಧಿನಿಯಮದ ಪ್ರಕರಣ 38 ರ ಮೇರೆಗೆ ಅಪಘಾತದ ನೋಟೀಸನ್ನು ಇ-ಮೇಲ್, ಟೆಲೆಕ್ಸ್, ಅಥವಾ ದೂರವಾಣಿ, ಅಥವಾ ವಿಶೇಷ ಸಂದೇಶವಾಹಕ ಅಥವಾ ದೊರೆಯಬಹುದಾದ ಮತ್ತು ಅವಶ್ಯವೆಂದು ಪರಿಗಣಿಸುವ ಯಾವುದೇ ಸಾಧನದ ಮೂಲಕ ಯಾವುದೇ ವಿಳಂಬವಿಲ್ಲದೆ ರವಾನಿಸತಕ್ಕದ್ದು.

5. **ಅಪಘಾತ ಸ್ಥಳ ತಲುಪಲು ಸೌಕರ್ಯ:** ಬೆಂಗಳೂರು ಮೆಟ್ರೋ ರೈಲ್ವೆಯು ಕಾರ್ಯನಿರ್ವಹಿಸುತ್ತಿರುವ ಸಮಯದಲ್ಲಿ ಯಾವುದೇ ಅಪಘಾತ ಸಂಭವಿಸಿದರೆ, ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತವು, ಜಿಲ್ಲಾಧಿಕಾರಿಗಳಿಗೆ ಅಥವಾ ಅಧಿನಿಯಮದ ಪ್ರಕರಣ 38 ರ ಮೇರೆಗೆ ನೇಮಕಗೊಂಡ ಮ್ಯಾಜಿಸ್ಟ್ರೇಟರಿಗೆ, ಅಥವಾ ವಿಚಾರಣಾ ಸಮಿತಿಗಳ ಅಧಿನಿಯಮ, 1952 (1952 ರ 60) ರ ಮೇರೆಗೆ ನೇಮಕಗೊಂಡ ವಿಚಾರಣಾ ಸಮಿತಿಗೆ, ಅಥವಾ ವಿಚಾರಣಾ ಸಮಿತಿಗಳ ಅಧಿನಿಯಮದ ಸಂಪೂರ್ಣ ಅಥವಾ ಯಾವುದೇ ಉಪಬಂಧಗಳು ಅನ್ವಯವಾಗುವ ಪ್ರಾಧಿಕಾರಕ್ಕೆ ಮತ್ತು ಆಯುಕ್ತರಿಗೆ, ವೈದ್ಯಾಧಿಕಾರಿಗಳಿಗೆ, ಪೋಲಿಸರಿಗೆ ಮತ್ತು ಸಂಬಂಧಪಟ್ಟವರಿಗೆ ಅಪಘಾತ ಸ್ಥಳಕ್ಕೆ ತ್ವರಿತವಾಗಿ ತಲುಪಲು ಸೂಕ್ತ ನೆರವು ನೀಡತಕ್ಕದ್ದು. ಹಾಗೂ ಸದರಿ ಪ್ರಾಧಿಕಾರಗಳು ಅಪಘಾತ ಸಂಭವಿಸಿದ್ದಕ್ಕೆ ಕಾರಣ ತಿಳಿಯುವ ಸಲುವಾಗಿ ನಡೆಸುವ ವಿಚಾರಣೆಗೆ ಹಾಗೂ ಸಾಕ್ಷಿಗಳನ್ನು ಸಂಗ್ರಹಿಸಲು ಸಹಾ ನೆರವು ನೀಡತಕ್ಕದ್ದು.

6. **ಆಯುಕ್ತರು ಅಥವಾ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಸುವ ಸ್ಥಳದಲ್ಲಿ ಮೆಟ್ರೋ ರೈಲ್ವೆ ನೌಕರರ ಉಪಸ್ಥಿತಿ:** ನಿಯಮ 7 ರ ಮೇರೆಗೆ ಆಯುಕ್ತರು ವಿಚಾರಣೆ ನಡೆಸುತ್ತಿರುವ ಸಂದರ್ಭದಲ್ಲಿ, ಬೆಂಗಳೂರು ಮೆಟ್ರೋ ರೈಲ್ವೆಯ ಯಾವುದೇ ನೌಕರನ ಸಾಕ್ಷಿಯು ಸದರಿ ವಿಚಾರಣೆಗೆ ಅಗತ್ಯವಿದ್ದಲ್ಲಿ, ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತವು ಅವಶ್ಯವಿದ್ದಲ್ಲಿ ವಿಚಾರಣೆಗೆ ಸದರಿ ನೌಕರನು ವಿಚಾರಣೆ ಸ್ಥಳಕ್ಕೆ ಹಾಜರಾಗಲು ವ್ಯವಸ್ಥೆ ಮಾಡತಕ್ಕದ್ದು. ಹಾಗೂ ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತದ ಪ್ರಭಾರ ಅಧಿಕಾರಿಯು ಈ ಮುಂದಿನವುಗಳನ್ನು ನಿರ್ವಹಿಸತಕ್ಕದ್ದು.

(ಎ) ನಿಯಮ 10, ಉಪ ಪ್ರಕರಣ (1) ರ ಖಂಡ (ಬಿ)(ಸಿ) ಮತ್ತು (ಡಿ) ರಲ್ಲಿ ಉಲ್ಲೇಖಿಸಿರುವ ಅಧಿಕಾರಿಗಳಿಗೆ, ವಿಚಾರಣೆಯು ಪ್ರಾರಂಭವಾಗುವ ದಿನಾಂಕ, ಸಮಯ ಹಾಗೂ ಸ್ಥಳಗಳನ್ನು ಸೂಚಿಸುವ ನೋಟೀಸನ್ನು ನೀಡತಕ್ಕದ್ದು.

(ಬಿ) ವಿಚಾರಣೆಗೆ ಸಾಕ್ಷಿಯಾಗಿ ಅಗತ್ಯವಿದ್ದಲ್ಲಿ ಬೆಂಗಳೂರು ಮೆಟ್ರೋ ರೈಲ್ವೆ ನೌಕರನ ಹಾಜರಾತಿಗೆ ವ್ಯವಸ್ಥೆ ಮಾಡತಕ್ಕದ್ದು.

7. **ಅಪಘಾತಗಳ ಮೇಲಿನ ವಿಚಾರಣೆಯ ಪ್ರಕ್ರಿಯೆ ಹಾಗು ತದನಂತರ ಪ್ರಕರಣ 43 ರ ಮೇರೆಗೆ ವರದಿ:** (1) ಪ್ರಕರಣ 38 ರ ಉಪ ಪ್ರಕರಣ (2) ರ ಮೇರೆಗೆ, ಮಾನವನ ಪ್ರಾಣ ಹಾನಿ ಹಾಗೂ ಅಥವಾ ಗಂಭೀರ ಗಾಯಗಳುಂಟಾದರೆ, ಪ್ರಯಾಣಿಕರಿಗೆ ಶಾಶ್ವತ ಸ್ವರೂಪದ ಪೂರ್ಣ ಅಥವಾ ಭಾಗಶಃ ಅಶಕ್ತತೆಯಲ್ಲಿ ಕೊನೆಗೊಂಡ ಅಪಘಾತದ ಬಗ್ಗೆ ನೋಟೀಸನ್ನು ಸ್ವೀಕರಿಸಿದ ನಂತರ ಆಯುಕ್ತರು ವಿಚಾರಣೆ ನಡೆಸುವ ಉದ್ದೇಶಕ್ಕಾಗಿ ಸಾಧ್ಯವಾದಷ್ಟುಮಟ್ಟಿಗೆ ಶೀಘ್ರವಾಗಿ ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತದ

ಪ್ರಭಾರ ಅಧಿಕಾರಿಗೆ ಸೂಚಿಸಕ್ಕದ್ದು ಹಾಗೂ ಅದೇ ಸಮಯದಲ್ಲಿ ವಿಚಾರಣೆಯ ಸ್ಥಳ, ಸಮಯ ಹಾಗೂ ದಿನಾಂಕಗಳನ್ನು ನಿಗಧಿಪಡಿಸಿ ತಿಳಿಸತಕ್ಕದ್ದು.

(2) ಆಯುಕ್ತರು ವಿಚಾರಣೆ ನಡೆಸುವ ಸಂದರ್ಭದಲ್ಲಿ, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ, ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಹಾಗೂ ಪೋಲೀಸ್ ಉಪ ಆಯುಕ್ತರಿಗೆ ತಿಳಿಸಬೇಕು ಅಥವಾ ತಿಳಿಯಪಡಿಸಬೇಕು.

(3) ಜಿಲ್ಲಾಧಿಕಾರಿ ಅಥವಾ ಪೋಲೀಸ್ ಉಪಆಯುಕ್ತರು, ಸಂದರ್ಭಾನುಸಾರ ಸಾಧ್ಯವಾದಷ್ಟುಮಟ್ಟಿಗೆ ಆಯುಕ್ತರು ನಡೆಸುವ ವಿಚಾರಣೆಗೆ ವೈಯಕ್ತಿಕವಾಗಿ ಹಾಜರಾಗತಕ್ಕದ್ದು ಅಥವಾ ಇತರೆ ಅಧಿಕಾರಿಯನ್ನು ಅವರ ಪ್ರತಿನಿಧಿಯಾಗಿ ವಿಚಾರಣೆಗೆ ನಿಯೋಜಿಸತಕ್ಕದ್ದು.

(4) ಸಂಘರ್ಷ ಅಥವಾ ಹಳ್ಳಿತಪ್ಪಿ ಆದ ಯಾವುದೇ ರೀತಿಯ ಅಪಘಾತದ ವಿಚಾರಣೆಯು ಪೂರ್ಣಗೊಂಡ ನಂತರ, ಸಂದರ್ಭಾನುಸಾರ, ಕಮಿಷನರು ರೈಲ್ವೆ ಸುರಕ್ಷಾ ಮುಖ್ಯ ಆಯುಕ್ತರಿಗೆ ಸಂಕ್ಷಿಪ್ತ ಪ್ರಾಥಮಿಕ ವರದಿಯನ್ನು ಸಲ್ಲಿಸತಕ್ಕದ್ದು. ಸದರಿ ವರದಿಯು ಸಂಗತಿಗಳಿಂದ ಕೂಡಿದ್ದು ಯಾವುದೇ ವ್ಯಕ್ತಿಯನ್ನು ಸಿಲುಕಿಸುವ ಉಲ್ಲೇಖವಿರತಕ್ಕದ್ದಲ್ಲ.

(5) ಆಯುಕ್ತರು ಸಾಧ್ಯವಾದಷ್ಟುಮಟ್ಟಿಗೆ ಆದಷ್ಟು ಶೀಘ್ರವಾಗಿ ವಿಚಾರಣೆಯನ್ನು ಪೂರ್ಣಗೊಳಿಸತಕ್ಕದ್ದು ಮತ್ತು ರೈಲ್ವೆ ಸುರಕ್ಷಾ ಆಯುಕ್ತರಿಗೆ ವಿವರವಾದ ವರದಿಯನ್ನು ಸಲ್ಲಿಸತಕ್ಕದ್ದು.

(6) ಉಪ-ನಿಯಮ (5) ರಲ್ಲಿ ಉಲ್ಲೇಖಿಸಲಾದ ವಿವರವಾದ ವರದಿಯು ಗೌಪ್ಯವಾಗಿರತಕ್ಕದ್ದು ಹಾಗೂ ನಿಯಮ 11 ರ ಉಪ ನಿಯಮ (1) ರಲ್ಲಿ ನಿರ್ದಿಷ್ಟಪಡಿಸಿದ ವಿವರಗಳನ್ನು ಒಳಗೊಂಡಿರತಕ್ಕದ್ದು.

(7) ಆಯುಕ್ತರು ತನ್ನ ವರದಿಯ ಪ್ರತಿಯನ್ನು ಈ ಮುಂದಿನವರಿಗೆ ರವಾನಿಸತಕ್ಕದ್ದು.

(1) ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತ

(2) ಭಾರತ ಸರ್ಕಾರ (ನಗರಾಭಿವೃದ್ದಿ ಮಂತ್ರಾಲಯ ಮತ್ತು ರೈಲ್ವೆ ಮಂತ್ರಾಲಯ);

(3) ಕರ್ನಾಟಕ ಸರ್ಕಾರ;

(4) ವಿಧ್ವಂಸಕ ಕೃತ್ಯ ಅಥವಾ ರೈಲನ್ನು ಧ್ವಂಸಗೊಳಿಸಲು ಅಪಘಾತ ಸಂಭವಿಸಿದೆಯೆಂದು ಆಯುಕ್ತರಿಗೆ ಕಂಡುಬಂದಲ್ಲಿ, ನಿರ್ದೇಶಕರು, ಗುಪ್ತವಾರ್ತಾ ಸಂಸ್ಥೆ, ಗೃಹ ವ್ಯವಹಾರಗಳ ಮಂತ್ರಾಲಯ, ಭಾರತ ಸರ್ಕಾರ ಮತ್ತು ಪೊಲೀಸ್ ಆಯುಕ್ತರು, ಬೆಂಗಳೂರು ಇವರಿಗೆ ರವಾನಿಸತಕ್ಕದ್ದು.

(8) ರೈಲ್ವೆ ಸುರಕ್ಷಾ ಮುಖ್ಯ ಆಯುಕ್ತರು ವರದಿಯನ್ನು ಪ್ರಕಟಿಸುವ ಸಲುವಾಗಿ ಶಿಫಾರಸ್ಸು ಮಾಡತಕ್ಕದ್ದು, ತದನುಸಾರವಾಗಿ ನಗರಾಭಿವೃದ್ಧಿ ಮಂತ್ರಾಲಯ ಮತ್ತು ರೈಲ್ವೆ ಮಂತ್ರಾಲಯಗಳಿಗೆ ತಿಳಿಸತಕ್ಕದ್ದು.

ಪರಂತು, ನಗರಾಭಿವೃದ್ಧಿ ಮಂತ್ರಾಲಯವು ರೈಲ್ವೆ ಸುರಕ್ಷಾ ಮುಖ್ಯ ಆಯುಕ್ತರ ವರದಿಯನ್ನು ಪ್ರಕಟಿಸುವ ಸಂಬಂಧದ ಶಿಫಾರಸ್ಸನ್ನು ಕಾಯ್ದಿರಿಸಿದರೆ, ಅಂತಹ ವಿಷಯಗಳನ್ನು ಕೇಂದ್ರ ಸರ್ಕಾರದ ನಾಗರೀಕ ವಿಮಾನಯಾನ ಮಂತ್ರಾಲಯವು ನಿರ್ಣಯಿಸತಕ್ಕದ್ದು.

**8. ಪ್ರಕರಣ 40 ರ ಮೇರೆಗೆ ಮೆಟ್ರೋ ರೈಲ್ವೆ ಆಡಳಿತದಿಂದ ಅಪಘಾತಗಳ ವಿಚಾರಣೆ:** (1) ಅಧಿನಿಯಮದ 38ರಲ್ಲೊಳಗೊಂಡ ಅಪಘಾತದ ವಿಚಾರಣೆ ನಡೆಸಲು ಅಪಘಾತ ಸಂಭವಿಸಿದ ಸಮೀಪದ ದಿನಾಂಕದಿಂದ ವಿಚಾರಣೆ ನಡೆಸಲು ಆಯುಕ್ತರು ಯಾವುದೇ ಕಾರಣಗಳಿಂದ ಅಸಮರ್ಥರಾದರೆ, ಅವರು ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತದ ಪ್ರಭಾರ ಅಧಿಕಾರಿಗಳಿಗೆ, ತಾನು ವಿಚಾರಣೆ ನಡೆಸದಿರುವುದಕ್ಕೆ ಅಸಮರ್ಥನಾಗಲು ಕಾರಣಗಳನ್ನು ತಿಳಿಸತಕ್ಕದ್ದು.

(2) ಅಧಿನಿಯಮದ ಪ್ರಕರಣ 39 ರ ಉಪ-ಪ್ರಕರಣ (1) ರಲ್ಲಿ ಆಯುಕ್ತರು ಸದರಿ ವಿಚಾರಣೆಯನ್ನು ನಡೆಸದಿದ್ದರೆ, ಅಥವಾ ಉಪ-ಪ್ರಕರಣ (2) ರ ಮೇರೆಗೆ ಆಯುಕ್ತರು ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತಕ್ಕೆ ತಾನು ವಿಚಾರಣೆಯನ್ನು ನಡೆಸಲು ಅಸಮರ್ಥನೆಂದು ತಿಳಿಸಿದ ಸಂದರ್ಭಗಳಲ್ಲಿ, ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತದ ಪ್ರಭಾರ ಅಧಿಕಾರಿಯು ಪ್ರಕರಣ 11 ರ ಉಪ-ಪ್ರಕರಣ (1) ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಗಳಿಗನುಸಾರವಾಗಿ ವಿಚಾರಣೆ ನಡೆಸಲು ವ್ಯವಸ್ಥೆ ಮಾಡತಕ್ಕದ್ದು.

**9. ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತದಿಂದ ವಿಚಾರಣೆ ನಡೆಸಲು ಪ್ರಕ್ರಿಯೆ:** ಅಧಿನಿಯಮದ ಪ್ರಕರಣ 39 ರ ಉಪ-ಪ್ರಕರಣ (2) ರ ಮೇರೆಗೆ ಮಾಹಿತಿ ಸ್ವೀಕರಿಸಿದ ತರುವಾಯ, ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತದ ಪ್ರಭಾರ ಅಧಿಕಾರಿಯು, ಅಪಘಾತ ಸಂಭವಿಸಲು ಘರ್ಷಣೆ ಅಥವಾ ಹಳಿತಪ್ಪುವಿಕೆ, ಸಂದರ್ಭಾನುಸಾರ ಕಾರಣ ತಿಳಿಯಲು ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತದ ನೌಕರರಿಂದ ಕೂಡಿದ ಸಮಿತಿಯನ್ನು ರಚಿಸತಕ್ಕದ್ದು. (ಇದನ್ನು ಜಂಟಿ ವಿಚಾರಣೆ ಅಥವಾ ಇಲಾಖಾ ವಿಚಾರಣೆ ಎಂದು ಕರೆಯತಕ್ಕದ್ದು)

**10. ಜಂಟಿ ವಿಚಾರಣೆ ಅಥವಾ ಇಲಾಖಾ ವಿಚಾರಣೆಯ ನೋಟೀಸು:** ಜಂಟಿ ವಿಚಾರಣೆ ಅಥವಾ ಇಲಾಖಾ ವಿಚಾರಣೆ ನಡೆಸುವ ಸಂದರ್ಭಗಳಲ್ಲಿ, ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತದ ಪ್ರಭಾರ

ಅಧಿಕಾರಿಯು ವಿಚಾರಣೆ ಪ್ರಾರಂಭವಾಗುವ ದಿನಾಂಕ, ಸ್ಥಳ ಮತ್ತು ಸಮಯವನ್ನು ಸೂಚಿಸುವ ನೋಟೀಸನ್ನು ಈ ಕೆಳಕಂಡ ಅಧಿಕಾರಿಗಳಿಗೆ ಜಾರಿಗೊಳಿಸತಕ್ಕದ್ದು.

(ಎ) ಅಪಘಾತ ಸಂಭವಿಸಿದ ಬೆಂಗಳೂರು ಮೆಟ್ರೋ ರೈಲ್ವೆಯ ಸಂಬಂಧಪಟ್ಟ ಆಯುಕ್ತರಿಗೆ

(ಬಿ) ಯಾವ ಜಿಲ್ಲೆಯ ವ್ಯಾಪ್ತಿಯೊಳಗೆ ಅಪಘಾತ ಸಂಭವಿಸಿದೆಯೋ ಆ ಜಿಲ್ಲೆಯ ಜಿಲ್ಲಾಧಿಕಾರಿಗೆ ಅಥವಾ ಈ ಸಂಬಂಧ ಕರ್ನಾಟಕ ಸರ್ಕಾರವು ನೇಮಿಸಬಹುದಾದಂತಹ ಅಧಿಕಾರಿಗೆ,

(ಸಿ) ಅಫಘಾತ ಸಂಭವಿಸಿದ ಸ್ಥಳದ ಅಧಿಕಾರವ್ಯಾಪ್ತಿಯುಳ್ಳ ಉಪ ಪೋಲೀಸ್ ಆಯುಕ್ತರಿಗೆ

(ಡಿ) ಸದರಿ ಸ್ಥಳದ ಅಧಿಕಾರವ್ಯಾಪ್ತಿಯುಳ್ಳ ಪೊಲೀಸ್ ಠಾಣಾ ಪ್ರಭಾರಾಧಿಕಾರಿಗೆ

(2) ಉಪ ನಿಯಮ (1) ರಲ್ಲಿ ಉಲ್ಲೇಖಿಸಲಾದ ಅಧಿಕಾರಿಗಳಿಗೆ ವಿಚಾರಣಾ ಸ್ಥಳಕ್ಕೆ ತಲುಪಲು ಸಾಕಷ್ಟು ಸಮಯಾವಕಾಶ ಒದಗಿಸುವ ಸಲುವಾಗಿ, ವಿಚಾರಣೆ ಪ್ರಾರಂಭದ ದಿನಾಂಕ, ಸ್ಥಳ ಹಾಗೂ ಸಮಯವನ್ನು ಮುಂಚಿತವಾಗಿ ನಿಗದಿಪಡಿಸತಕ್ಕದ್ದು.

**11. ಜಂಟಿ ವಿಚಾರಣೆ ಅಥವಾ ಇಲಾಖಾ ವಿಚಾರಣೆ ನಡೆಸಲು ಪ್ರಕ್ರಿಯೆ ಮತ್ತು ತದನಂತರ ಅದರ ಮೇಲೆ ಕ್ರಮ ತೆಗೆದುಕೊಳ್ಳುವಿಕೆ:** ಜಂಟಿ ವಿಚಾರಣೆ ಅಥವಾ ಇಲಾಖಾ ವಿಚಾರಣೆಗೆ, ಅಪಘಾತಕ್ಕೆ ಕಾರಣಗಳನ್ನು ಕಂಡುಹಿಡಿಯಲು ಪರ್ಯಾಪ್ತ ಸವಿವರ ನೀಡತಕ್ಕದ್ದು ಮತ್ತು ವಿಚಾರಣೆ ಮುಕ್ತಾಯವಾದ ನಂತರ, ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತದ ಪ್ರಭಾರ ಅಧಿಕಾರಿಗೆ ವರದಿ ಸಲ್ಲಿತಕ್ಕದ್ದು ಮತ್ತು ಸದರಿ ವರದಿಯು ಮುಂದಿನ ವಿವರಗಳನ್ನು ಒಳಗೊಂಡಿರತಕ್ಕದ್ದು. ಅವುಗಳೆಂದರೆ:-

(ಎ) ಅಪಘಾತದ ಸಂಕ್ಷಿಪ್ತ ವಿವರಣೆ;

(ಬಿ) ಅಪಘಾತ ಸ್ಥಳದ ವಿವರಣೆ;

(ಸಿ) ಪಡೆದ ಸಾಕ್ಷಿಯ ವಿವರವಾದ ಹೇಳಿಕೆ

(ಡಿ) ಒಮ್ಮತವಾಗಿ ನಿರ್ಣಯಕ್ಕೆ ಬಂದರೆ, ಭಿನ್ನಾಭಿಪ್ರಾಯಗಳೇನಾದರೂ ಇದ್ದರೆ, ಟಿಪ್ಪಣಿಯೊಂದಿಗೆ

(ಇ) ನಿರ್ಣಯಕ್ಕೆ ಬರಲು ಕಾರಣಗಳು

(ಎಫ್) ಹಾನಿಯ ಸ್ವರೂಪ ಮತ್ತು ವಿಸ್ತಾರ

(ಜಿ) ಅವಶ್ಯವಿದ್ದಲ್ಲಿ, ಅಪಘಾತ ವಿವರಣಾತ್ಮಕ ನಕ್ಷೆ

(ಹೆಚ್) ಗಾಯಗೊಂಡ ಅಥವಾ ಮರಣಹೊಂದಿದ ಮೆಟ್ರೋ ರೈಲ್ವೆ ನೌಕರರ ಸಂಖ್ಯೆ

(ಐ) ಗಾಯಗೊಂಡ ಅಥವಾ ಮರಣಹೊಂದಿದ ಪ್ರಯಾಣಿಕರ ಸಂಖ್ಯೆ

(ಜೆ) ಇದು ವ್ಯವಸ್ಥೆಯ ವೈಫಲ್ಯವೇ ಅಥವಾ ವ್ಯಕ್ತಿಯೊಬ್ಬರ ವೈಫಲ್ಯವೇ

(ಕೆ) ಅಪಘಾತಕ್ಕೆ ಕಾರಣವಾದ ಸಿಬ್ಬಂದಿಯು ಉಲ್ಲಂಘಿಸಿದ ನಿಯಮಗಳ ಉದ್ಧೃತ ಭಾಗವನ್ನೊಳಗೊಂಡ ಪರಿಶಿಷ್ಟ(ಎಲ್) ಪ್ರಸ್ತಾವಿತ ಪರಿಹಾರಿಕ ಕ್ರಮ

(2) ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತದ ಪ್ರಭಾರ ಅಧಿಕಾರಿಯು, ಅಪಘಾತಕ್ಕೆ ಕಾರಣವಾದ ಸಿಬ್ಬಂದಿಯ ಮೇಲೆ ಕ್ರಮತೆಗೆದುಕೊಳ್ಳುವ ಉದ್ದೇಶದಿಂದ, ಅಥವಾ ನಿಯಮಗಳ ಪುನರೀಕ್ಷಣೆಯ ಬಗ್ಗೆ, ಅಥವಾ ಕಾರ್ಯನಿರ್ವಹಣಾ ವ್ಯವಸ್ಥೆಯ ಪುನರೀಕ್ಷಣೆಯ ಬಗ್ಗೆ, ತನ್ನ ಶಿಫಾರಸ್ಸುಗಳನ್ನೊಳಗೊಂಡ ಉಪ ಪ್ರಕರಣ (1) ರ ಮೇರೆಯ ವರದಿಯ ಪ್ರತಿಗಳನ್ನು ಆಯುಕ್ತರಿಗೆ ರವಾನಿಸತಕ್ಕದ್ದು.

12. **ಪ್ರಕರಣ 45 ರ ವ್ಯಾಪ್ತಿಯಲ್ಲಿನ ಅಪಘಾತಗಳ ಮೇಲಿನ ವಿಚಾರಣಾ ವರದಿಯನ್ನು ಕಮಿಷನರಿಗೆ ರವಾನಿಸುವ ಬಗ್ಗೆ:** (1) ಬೆಂಗಳೂರು ಮೆಟ್ರೋ ರೈಲ್ವೆ ಕಾರ್ಯನಿರ್ವಹಿಸುತ್ತಿರುವಾಗ ಪ್ರಕರಣ 38 ರಲ್ಲಿ ನಿರ್ದಿಷ್ಟಪಡಿಸಿದ ಸ್ವರೂಪದ್ದಲ್ಲದ ಅಪಘಾತಗಳು ಸಂಭವಿಸಿದರೆ, ಅಂದರೆ ಘರ್ಷಣೆಯನ್ನು ತಪ್ಪಿಸಲು, ನಿಯಮಗಳ ಉಲ್ಲಂಘನೆ, ಅಥವಾ ತಾಂತ್ರಿಕ ಅಪಘಾತಗಳಿಂದ ಸಂಭವಿಸಿದರೆ, ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತದ ಪ್ರಭಾರ ಅಧಿಕಾರಿಯು ನಿಯಮ 11ರ ಉಪ-ನಿಯಮ (1) ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಗಳಿಗನುಸಾರವಾಗಿ ಜಂಟಿ ವಿಚಾರಣೆ ಅಥವಾ ಇಲಾಖೆ ವಿಚಾರಣೆ ಎರಡರಲ್ಲೊಂದನ್ನು ನಡೆಸಲು ವ್ಯವಸ್ಥೆ ಮಾಡತಕ್ಕದ್ದು.

13. **ಅಪಘಾತಗಳ ವಿವರಪಟ್ಟಿಕೆ:** ಪ್ರತಿ ಆರ್ಥಿಕ ವರ್ಷದ ಕೊನೆಯಲ್ಲಿ, ಬೆಂಗಳೂರು ಮೆಟ್ರೋ ರೈಲ್ವೆಯಲ್ಲಿ ಸದರಿ ಆರ್ಥಿಕ ವರ್ಷದಲ್ಲಿ ಸಂಭವಿಸಿದ ಎಲ್ಲಾ ಅಪಘಾತಗಳ ವಿವರಪಟ್ಟಿಕೆಯನ್ನು ಯಾವುದೇ ವ್ಯಕ್ತಿಯು ಗಾಯಗೊಂಡಿರಲಿ ಅಥವಾ ಗಾಯಗೊಂಡಿಲ್ಲದಿರಲಿ, ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತದ ಪ್ರಭಾರ ಅಧಿಕಾರಿಯು, ನಮೂನೆ II ರಲ್ಲಿ ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಮಂತ್ರಾಲಯಕ್ಕೆ ಹಾಗೂ ರೈಲ್ವೆ ಮಂತ್ರಾಲಯಕ್ಕೆ ಕಳುಹಿಸತಕ್ಕದ್ದು.

**ನಮೂನೆ I**

(ನಿಯಮ 3 ನೋಡಿ)

**ಮೆಟ್ರೋ ರೈಲ್ವೆ (ಪ್ರಚಾಲನೆ ಮತ್ತು ನಿರ್ವಹಣೆ) ಅಧಿನಿಯಮ, 2002 ರ ಪ್ರಕರಣ 38 ರ ಮೇರೆಗೆ ಅಪಘಾತಗಳ ನೋಟೀಸು**

ಅಪಘಾತದ ವಿವರಗಳು ಈ ಕೆಳಕಂಡಂತಿವೆ:

(ಎ) ಅಪಘಾತದ ದಿನಾಂಕ ಮತ್ತು ಸಮಯ;

(ಬಿ) ಅಪಘಾತದ ಸ್ವರೂಪ

(ಸಿ) ಅಪಘಾತ ಸಂಭವಿಸಿದ ಕಿಲೋಮೀಟರೇಜ್, ಅಥವಾ ನಿಲ್ದಾಣ, ಅಥವಾ ಎರಡೂ

(ಡಿ) ರೈಲು ಅಥವಾ ರೈಲುಗಳ ಸಂಖ್ಯೆ ಮತ್ತು ವಿವರಣೆ

(ಇ) ತಿಳಿದ ಮಟ್ಟಿಗೆ, ಗಾಯಗೊಂಡ ಅಥವಾ ಮರಣಹೊಂದಿದವರ ಸಂಖ್ಯೆ

(ಎಫ್) ತಿಳಿದ ಮಟ್ಟಿಗೆ, ಅಪಘಾತಕ್ಕೆ ಕಾರಣ

(ಜಿ) ಸಂಚಾರಕ್ಕೆ ಸಂಭಾವ್ಯ ನಿರೋಧ

**ನಮೂನೆ II**

(ನಿಯಮ 13 ನೋಡಿ)

**ಮೆಟ್ರೋ ರೈಲ್ವೆ (ಪ್ರಚಾಲನೆ ಮತ್ತು ನಿರ್ವಹಣೆ) ಅಧಿನಿಯಮ, 2002 ರ ಪ್ರಕರಣ 46 ರ ಮೇರೆಗೆ ಸಲ್ಲಿಸಬೇಕಾದ ಸದರಿ ಸಾಲಿನಲ್ಲಿ ಸಂಭವಿಸಿದ ಅಪಘಾತಗಳ ವಿವರಪಟ್ಟಿಕೆ**

| ಕ್ರಮ ಸಂಖ್ಯೆ | ಅಪಘಾತದ ದಿನಾಂಕ | ಅಪಘಾತದ ಸಂಕ್ಷಿಪ್ತ ವಿವರಗಳು | ಈ ಸ್ವರೂಪದ ಅಪಘಾತಗಳು ಮರುಸಂಭವಿಸದಂತೆ ತಡೆಗಟ್ಟಲು ತೆಗೆದುಕೊಂಡ ಕ್ರಮ | ಷರಾ |
|---|---|---|---|---|
| | | | | |

(ಎಫ್. ಸಂಖ್ಯೆ. ಕೆ-14011/45/2010-ಮೆಟ್ರೋ)

ಎಸ್.ಕೆ. ಲೋಹಿಯಾ, ಓಎಸ್‌ಡಿ (ನಗರ ಸಾರಿಗೆ) ಮತ್ತು ಕಾ.ಅ. ಜಂಟಿ ಕಾರ್ಯದರ್ಶಿ